12 ಪೋಲೀಸ್ ಕಾನ್‌ಸ್ಟೇಬಲ್ಸ್ 4 ಪಿಎಸ್‌ಐ ಕ್ವಾರ್ಟರ್ಸ್ ಧಾರವಾಡದಲ್ಲಿ ಕೆಲಸ ಶುರು ಮಾಡುತ್ತೇವೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಕೆರೆಗಳಲ್ಲಿನ ಹೂಳನ್ನು ಎತ್ತುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 186 (1021)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳೆಷ್ಟು? ಅವುಗಳಲ್ಲಿ ನೀರಾವರಿ ಕೃಷಿಗಾಗಿ ಬಳಸುವ ಕೆರೆಗಳ ತಾಲ್ಲೂಕುವಾರು ವಿವರ ನೀಡುವುದು?

ಆ) ಹಾಗಿದ್ದಲ್ಲಿ ಈ ಮೇಲಿನ ಕೆರೆಗಳಲ್ಲಿ ಹೂಳು ತೆಗೆಯಲಾಗಿದೆಯೇ (ಕಳೆದ ಮೂರು ವರ್ಷಗಳಲ್ಲಿ ಹೂಳು ತೆಗೆಸಿರುವ ವಿವರ ನೀಡುವುದು)?

ಇ) ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ದುರಸ್ತಿ ಕೆಲಸಕ್ಕಾಗಿ ಕೈಗೊಂಡ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ ಒಟ್ಟು 1965 ಕೆರೆಗಳು ಇರುತ್ತವೆ. ಈ ಎಲ್ಲಾ ಕೆರೆಗಳನ್ನು ನೀರಾವರಿ ಕೃಷಿಗಾಗಿ ಬಳಸಲಾಗುತ್ತಿವೆ, 40 ಹೆಕ್ಟೇರ್‌ಗಿಂತ ಕಡಿಮೆ ನೀರಾವರಿ ಕ್ಷೇತ್ರವಿರುವ ಕೆರೆಗಳು ಜಿಲ್ಲಾ ಪಂಚಾಯತ್ತಿನ ನಿಯಂತ್ರಣದಲ್ಲಿದ್ದು, 40 ಹೆಕ್ಟೇರ್‌ಗಿಂತ ಮೇಲ್ಪಟ್ಟು ನೀರಾವರಿ ಕ್ಷೇತ್ರವಿರುವ ಕೆರೆಗಳ ಸಣ್ಣ ನೀರಾವರಿ ಉತ್ತರ ವಲಯದ ನಿಯಂತ್ರಣದಲ್ಲಿರುತ್ತದೆ.

ತಾಲ್ಲೂಕುವಾರು ವಿವರ ಹಾಗೂ ನೀರಾವರಿ ಕ್ಷೇತ್ರವನ್ನು ಕೆಳಗಡೆ ಕೊಡಲಾಗಿದೆ:

ಕ್ರ. ಸಂ.	ತಾಲ್ಲೂಕು	ಸಣ್ಣ ನೀರಾವರಿ ವಲಯದ ಕೆರೆಗಳು		ಜಿಲ್ಲಾ ಪಂಚಾಯತ್‌ನ ವ್ಯಾಪ್ತಿಯ ಕೆರೆಗಳು	
		ಸಂಖ್ಯೆ	ಕ್ಷೇತ್ರ	ಸಂಖ್ಯೆ	ಕ್ಷೇತ್ರ.
1	2	3	4	5	6
1.	ಧಾರವಾಡ	38	6032.78	63	1032.51
2.	ಹುಬ್ಬಳ್ಳಿ	10	774.78	32	473.45
3.	ಕಲಘಟಗಿ	58	5946.59	330	3972.87
4.	ನರಗುಂದ	-	-	-	-
5.	ನವಲ್‌ಗುಂದ	-	-	-	-
6.	ಶಿರಹಟ್ಟಿ	9	1424.61	3	84.10
7.	ಮುಂಡರಗಿ	9	3823.01	-	-
8.	ಗದಗ	1	818.00	-	-
9.	ಸವಣೂರ	10	1191.94	4	39.90
10.	ರೋಣ	4	732.07	1	8.10
11.	ಕುಂದಗೋಳ	1	182.00	13	215.38
12.	ಹಾನಗಲ್	98	17655.67	410	5433.32
13.	ಶಿಗ್ಗಾಂವ್	40	3575.58	211	3208.07
14.	ಬ್ಯಾಡಗಿ	22	1736.09	146	1678.78
15.	ಹಾವೇರಿ	11	1361.43	26	207.00
16.	ಹಿರೇಕೆರೂರ್	36	4646.39	362	4278.78
17.	ರಾಣಿಬೆನ್ನೂರ್	15	2664.15	2	31.74
	ಒಟ್ಟು	362	52565.10	1603	20664.00

ಆ) ಮೇಲೆ ತಿಳಿಸಿದ ಕೆರೆಗಳಲ್ಲಿ ಕೆಲವು ಕೆರೆಗಳಲ್ಲಿ ಭರ್ತಿಯಾಗಿ ಹೂಳು ತುಂಬಿದೆ. ಆದರೆ ಎಷ್ಟೋ ಕೆರೆಗಳು ಹೆಚ್ಚುವರಿ ಹರಿಯದೇ ಇರುವುದರಿಂದ, ಇಂಥ ಕೆರೆಗಳ ಹೂಳನ್ನು ತೆಗೆಯುವ ಅವಶ್ಯಕತೆ ಇರುವುದಿಲ್ಲ ಎಂದು ಪರಿಗಣಿಸಲಾಗಿದೆ. ಈ

ವಿಷಯವನ್ನು ಪರಿಗಣಿಸಿ ಕಳೆದ 3 ವರ್ಷಗಳಲ್ಲಿ ಕೆರೆಗಳಲ್ಲಿ ಹೂಳು ತೆಗೆದ ವಿವರವನ್ನು ಈ ಕೆಳಗಿನಂತೆ ಕೊಡಲಾಗಿದೆ.

ವರ್ಷ	ಸಣ್ಣ ನೀರಾವರಿ ವಲಯದ ಕೆರೆಗಳು		ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳು		ವಿಭಾಗ
	ಸಂಖ್ಯೆ	ವೆಚ್ಚದ ಮೊತ್ತ (ರೂ. ಲಕ್ಷಗಳಲ್ಲಿ)	ಸಂಖ್ಯೆ	ವೆಚ್ಚದ ಮೊತ್ತ (ರೂ. ಲಕ್ಷಗಳಲ್ಲಿ)	
1	2	3	4	5	6
1993-94	7	9.35	1	1.21	ಗದಗ
1994-95	7	129.10	1	0.83	ಗದಗ
1995-96	7	57.53	-	-	

ಇ) ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ದುರಸ್ತಿಗಾಗಿ ಸಣ್ಣ ನೀರಾವರಿ ವಲಯದ ವ್ಯಾಪ್ತಿಯಲ್ಲಿ ಮತ್ತು ಜಿಲ್ಲಾ ಕಾರ್ಯವ್ಯಾಪ್ತಿಯಲ್ಲಿ ಖರ್ಚು ಮಾಡಿದ ವಿವರಗಳು ಈ ಕೆಳಗಿನಂತೆ ಇರುತ್ತವೆ.

(ರೂ. ಲಕ್ಷಗಳಲ್ಲಿ)

ವರ್ಷ	ಸಣ್ಣ ನೀರಾವರಿ ವಲಯದ ಕೆರೆಗಳು		ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳು		ವಿಭಾಗ
	ಸಂಖ್ಯೆ	ವೆಚ್ಚದ ಮೊತ್ತ	ಸಂಖ್ಯೆ	ವೆಚ್ಚದ ಮೊತ್ತ	
1	2	3	4	5	6
1993-94	-	-	5	21.93	ಧಾರವಾಡ
			6	-	ಹಾವೇರಿ
1994-95	-	-	5	30.71	ಧಾರವಾಡ
			6	-	ಹಾವೇರಿ
1995-96	8	3.73	5	33.50	ಧಾರವಾಡ
			6	-	ಹಾವೇರಿ

ಶ್ರೀ ಚಂದ್ರಕಾಂತ ಬೆಲ್ಲದ್:- ಕರ್ನಾಟಕದಲ್ಲಿ ಭೂಮಿಯಲ್ಲಿನ ಜಲ ಕಡಿಮೆಯಾಗುತ್ತಿದೆ. ಈ ಜಲವನ್ನು ಹೆಚ್ಚು ಮಾಡಲಿಕ್ಕೆ ಕೆರೆಗಳಲ್ಲಿ ಇರುವಂತಹ ಹೂಳನ್ನು ತೆಗೆಸಬೇಕು ಎಂಬುದು ಸರಕಾರಕ್ಕೆ ಗೊತ್ತಿದ್ದರೂ ಸಹ ನಾವು ಕೇಳಿದಂತಹ ಪ್ರಶ್ನೆಗೆ ಸರಿಯಾದಂತಹ ವಿವರಗಳನ್ನು ಕೊಟ್ಟಿಲ್ಲ. ಉದ್ದೇಶಪೂರ್ವಕವಾಗಿ ನಾವು ಕೇಳಿದಂತಹ ಮಾಹಿತಿಯನ್ನು ಕೊಟ್ಟಿಲ್ಲವೆಂದು ಹೇಳಬೇಕಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ನಾನು ಕೇಳಿದಂತಹ ಮಾಹಿತಿಗೆ, ಸಣ್ಣ ನೀರಾವರಿ ವಲಯದ ಕೆರೆಗಳು 362 ಇವೆ, 52,565 ಹೆಕ್ಟೇರ್ ಭೂಮಿ ಇದೆ ಎಂದು ಹೇಳಿದ್ದಾರೆ. ಆದರೆ ಇಷ್ಟೊಂದು ಕೆರೆಗಳಲ್ಲಿ ಸಾಕಷ್ಟು ಮಣ್ಣು ತುಂಬಿ, ಎಷ್ಟೋ ಕೆರೆಗಳಿಗೆ ಹೆಚ್ಚು ನೀರು ಹರಿಯದೇ ಇರುವುದು ಕಂಡು ಬಂದಿದೆ ಎಂದು ಹೇಳುತ್ತಿದ್ದಾರೆ. ಕೆರೆಗಳಲ್ಲಿ ಜಲ ಕಡಿಮೆಯಾಗುತ್ತಿದೆ, ಭೂಮಿಯಲ್ಲಿ ಜಲ ಕಡಿಮೆಯಾಗುತ್ತಿದೆ ಎಂದು ಎಲ್ಲಾ ಕಡೆಗಳಿಂದ ಕೂಗುತ್ತಿದ್ದಾಗ್ಯೂ ಸಹ ಈ ವರ್ಷದಲ್ಲಿ ತಾವು ಎಷ್ಟು ಹಣವನ್ನು ಖರ್ಚು ಮಾಡಬೇಕಾಗಿತ್ತೋ ಎಷ್ಟು ಹೂಳನ್ನು ತೆಗೆಸಬೇಕಾಗಿತ್ತೋ ಅದನ್ನು ತೆಗೆಸಲಿಲ್ಲ. ಏಕೆ ತೆಗೆಸಲಿಲ್ಲ? ಭೂಮಿಯಲ್ಲಿ ಇಷ್ಟೊಂದು ಜಲ ಕಡಿಮೆಯಾಗುತ್ತಿರುವಾಗ ನೀವು ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಕುಡಿಯುವ ನೀರಿಗೂ ತೊಂದರೆಯಾಗಿದೆ. ಇಷ್ಟೊಂದು ಸಂಖ್ಯೆಯಲ್ಲಿರುವಂತಹ ಕೆರೆಗಳಿಗೆ ಹೂಳು ತೆಗೆಸದೇ ಇರುವುದಕ್ಕೆ ಕಾರಣಗಳೇನು? ಜಿಲ್ಲಾ ಪಂಚಾಯತಿಯಲ್ಲಿ 1603 ಕೆರೆಗಳು ಇವೆ. 20,664 ಹೆಕ್ಟೇರ್ ಜಮೀನು ಇದೆ. ಇವತ್ತು ಒಂದು ಪೈಸೆ ಅದಕ್ಕೆ ಖರ್ಚು ಮಾಡಲಿಲ್ಲ. ಇದರ ಬಗ್ಗೆ ಸರಿಯಾದ ಮಾಹಿತಿ ಕೊಡುತ್ತಿಲ್ಲ. ಸರಕಾರ ಇದರ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ ಎಂದು ನಾವು ಹೇಳಬೇಕಾಗುತ್ತಿದೆ, ಸರಿಯಾದ ಮಾಹಿತಿಯನ್ನು ಸರಕಾರ ಕೊಡಬೇಕು. ಹೋದ ಸಲ ಮಳೆ ಇಲ್ಲವೆಂದು ತಮಗೆ ಗೊತ್ತಿದೆ. ಆಗ ಬೇಕಾದಷ್ಟು ಹೂಳನ್ನು ತೆಗೆಸಬಹುದಾಗಿತ್ತು ಕೆರೆಗಳು ಬತ್ತಿ ಹೋಗಿದ್ದವು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು.

ಶ್ರೀ ತಿಪ್ಪೆಸ್ವಾಮಿ:- ಇಡೀ ನಮ್ಮ ರಾಜ್ಯದಲ್ಲಿರತಕ್ಕಂತಹ ಕೆರೆಗಳಲ್ಲಿನ ಹೂಳು ತೆಗೆಸಿ, ಅದರಲ್ಲಿ ಬರತಕ್ಕಂತಹ ನೀರನ್ನು ನಿಲ್ಲಿಸಿ ಭೂಮಿಯಲ್ಲಿ ಇಂಗುವಂತೆ ಮಾಡಿದರೆ, ಸಾಕಷ್ಟು ನೀರು ಭೂಮಿಯಲ್ಲಿ ಇರುತ್ತದೆ. ಈ ಎಲ್ಲಾ ಕೆರೆಗಳಿಗೆ ಹೂಳು ತೆಗೆಯಬೇಕು ಎಂದು ಹೇಳಿದರೆ ಎಷ್ಟು ಹಣ ಬೇಕು ಅಷ್ಟು ಹಣ ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂತಹ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಭಾವನೆ ಏನು ಇದೆ, ಅದನ್ನು ನಮ್ಮ ಆರ್ಥಿಕ ವ್ಯವಸ್ಥೆ ಒಳಗೆ ಅದಕ್ಕೆ ತಕ್ಕಂತೆ ನಾವು ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರ ಭಾವನೆಯನ್ನು ನಾವು ಅರಿತು ಈ ಕೆರೆಗಳ ಹೂಳನ್ನು ತೆಗೆಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರುತ್ತೇನೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಯು.ಬಿ.ಬಣಕಾರ್:- ಧಾರವಾಡ ಜಿಲ್ಲೆಯಲ್ಲಿ ಮೈನರ್ ಇರಿಗೇಷನ್

ಇಲಾಖೆಯಿಂದ 1993-94ರಲ್ಲಿ ಕೇವಲ 9 ಲಕ್ಷ, 94-95ರಲ್ಲಿ ಒಂದು ಕೋಟಿ 29 ಲಕ್ಷ 1995-96ರಲ್ಲಿ ಕೇವಲ 60 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದು ಬಹಳ ದೊಡ್ಡ ಇಲಾಖೆ. ಕೊನೇ ಪಕ್ಷ ಅವರ ಆಡಳಿತ ವೆಚ್ಚಕ್ಕಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿದರೆ, ನಮಗೆ ಉಪಯೋಗವಾಗುತ್ತದೆ. ಈ ಹೂಳು ತೆಗೆಸುವ ಕೆಲಸವೇನು ಇದೆ ಇದಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕು. ಕೊಳವೆ ಬಾವಿಗಳನ್ನು ನಾವು ತೆಗೆಸುತ್ತಾ ಹೋಗುತ್ತಿದ್ದೇವೆ. ಈ ವರ್ಷವಾದರೂ ಇದಕ್ಕೆ ಹೆಚ್ಚಿನ ಹಣವನ್ನು ಇಟ್ಟು ಕೆರೆ ಹೂಳು ತೆಗೆಯುವುದಕ್ಕೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ತಿಪ್ಪೇಸ್ವಾಮಿ:- ಈ ವರ್ಷದ ಆರ್ಥಿಕ ವ್ಯವಸ್ಥೆಯಲ್ಲಿ ಸುಮಾರು 70 ಕೋಟಿ ಕೊಟ್ಟಿದ್ದಾರೆ. ನಾನು ಮಂತ್ರಿ ಪದವಿ ಸ್ವೀಕಾರ ಮಾಡಿದ ಮೇಲೆ ನಮ್ಮ ನಾಯಕರಾದ ಮುಖ್ಯ ಮಂತ್ರಿಗಳನ್ನು ಮತ್ತು ಹಣಕಾಸು ಸಚಿವರನ್ನು ಕೇಳಿ ಮುಂದಿನ ವರ್ಷದಿಂದ ಹೆಚ್ಚಿನ ಹಣವನ್ನು ಕೊಡಿ ಹೆಚ್ಚು ಕೆಲಸ ಮಾಡಬೇಕೆನ್ನುವ ಪ್ರವೃತ್ತಿ ಹೊಂದಿರುವುದರಿಂದ ನಾನು ಇದರ ಬಗ್ಗೆ ಮುಂದಿನ ದಿನಗಳಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಆರ್.ಯಾವಗಲ್:- ನೀರಾವರಿಯಲ್ಲಿ ಸಣ್ಣ ನೀರಾವರಿ ಕೆರೆಗಳು ಒಂದು ಭಾಗ. ನಮ್ಮ ಪ್ರದೇಶದಲ್ಲಿ ಕುಡಿಯುವ ನೀರಿನ ಕೆರೆಗಳು ಬಹಳ ಇವೆ. ಇವತ್ತು ಇ.ಎ.ಎಸ್. ಕೆಳಗಡೆ ಡೀ ಸಿಲ್ಟ್ ಮಾಡಲಿಕ್ಕೆ ಬಹುತೇಕ ಮೈನರ್ ಇರಿಗೇಷನ್ ಹೆಡ್‌ನಲ್ಲಿ ಹಣದ ಬಳಕೆಯಾಗುತ್ತಿದೆ. ನಮ್ಮಂತಹ ತಾಲ್ಲೂಕುಗಳಲ್ಲಿ ಬಹುಶಃ ನನ್ನ ಕ್ಷೇತ್ರದಲ್ಲಿ ಮತ್ತು ಪಕ್ಷದ ಕ್ಷೇತ್ರಗಳಲ್ಲಿ ಈ ಒಂದು ಹಣವನ್ನು ಬೇರೆ ಪ್ರದೇಶಗಳಿಗೆ ವರ್ಗಾವಣೆ ಮಾಡಿದ್ದೂ ಉಂಟು. ತಮ್ಮ ಇಲಾಖೆಯಿಂದ ಕೆರೆಗಳಲ್ಲಿರುವ ಹೂಳನ್ನು ಎತ್ತಲಿಕ್ಕೆ ತಾವು ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈ ಇ.ಎ.ಎಸ್.ನಿಂದ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳು ಶಾಸಕರುಗಳೇ ಆ ಒಂದು ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಾರೆ. ಹಣವನ್ನು ಕೊಟ್ಟರೆ ನಾನು ಪ್ರಾಮಾಣಿಕವಾಗಿ ಆ ಕೆಲಸವನ್ನು ಮಾಡುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಅಧ್ಯಕ್ಷರೇ, ಈ ಸಣ್ಣ ನೀರಾವರಿ ಇಲಾಖೆ ಎಷ್ಟೊಂದು ವಿಚಿತ್ರವಾದಂಥ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದೆ ಎಂದರೆ, ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಯಾವುದೋ ಒಂದು ಕೆರೆಯನ್ನು 95-96ರಲ್ಲಿ ಅನುದಾನಕ್ಕೆ ಒಳಪಡಿಸಿದ್ದರು. ಅದಕ್ಕೆ ಬೇಕಾದಂಥ ಒಟ್ಟು ಅನುದಾನ ಆರು ಲಕ್ಷ. ಅಲ್ಲಿ ಈಗ ಬಿಡುಗಡೆ ಮಾಡಿದಂಥ ಹಣ ಕೇವಲ ಮೂವತ್ತು ಸಾವಿರ ರೂಪಾಯಿ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ಈ ಪದ್ಧತಿ ಖಂಡಿತವಾಗಿಯೂ ಕೂಡ ಸರಿಯಿಲ್ಲ. ನೀವು ಆದ್ಯತೆಯ ಮೇರೆಗೆ ಆ ಕ್ಷೇತ್ರದ ಶಾಸಕರುಗಳು ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಅವಕಾಶವನ್ನು ಕೊಡಿ. ಹತ್ತು

ಕೆರೆಗಳನ್ನು ತೆಗೆದುಕೊಳ್ಳುವುದರ ಬದಲಾಗಿ ಎರಡೇ ಕೆರೆಗಳನ್ನು ತೆಗೆದುಕೊಳ್ಳಿ. ಅಲ್ಲಿ ಪೂರ್ಣ ಕೆಲಸವಾಗುವಂಥ ವ್ಯವಸ್ಥೆಯನ್ನು ನೀವು ಮಾಡದೇ ಇದ್ದರೆ ಅಲ್ಲಿ ಒದಗಿಸಿದಂಥ ಹಣ ಮೂವತ್ತು ಸಾವಿರ ರೂಪಾಯಿ ಏನಿದೆ ಅದರ ಪ್ರಕಾರ ಹತ್ತು ವರ್ಷ ಈ ರೀತಿಯಾಗಿ ಹಣ ಕೊಟ್ಟರೆ ಆ ಕೆರೆ ಉದ್ಧಾರವಾಗುವುದಿಲ್ಲ, ಆ ಕೆಲಸವೂ ಆಗುವುದಿಲ್ಲ. ಮತ್ತು ಆ ಕ್ಷೇತ್ರಕ್ಕೆ ನೀವು ಕಲ್ಯಾಣವನ್ನು ಕೂಡ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ವ್ಯವಸ್ಥೆಯನ್ನು ತಾವು ದಯವಿಟ್ಟು ಬದಲಾವಣೆ ಮಾಡಬೇಕು. ಈ ಪರಿಸ್ಥಿತಿಯನ್ನು ನೀವು ತಿಳಿಗೊಳಿಸಬೇಕೆಂದು ತಮ್ಮೂಲಕ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ, ಆ ಕಾರ್ಯಕ್ರಮವನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ವೈ ಕಗ್ಗಲ್ಲಿನ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 187 (1396)

ಶ್ರೀ ಅಲ್ಲಂ ವೀರಬದ್ರಪ್ಪ (ಕುರುಗೋಡು):- ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಬಳ್ಳಾರಿ ತಾಲ್ಲೂಕಿನ ವೈ ಕಗ್ಗಲ್ಲಿನ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ?

2. 1996-97ನೇ ಸಾಲಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆಯೇ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):-

1. ಪರಿಶೀಲನಾ ಹಂತದಲ್ಲಿದೆ.

2. ಪರಿಶೀಲಿಸಲಾಗುವುದು.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಾವು ನಿರೀಕ್ಷೆ ಮಾಡಿದಂತೆ ನಾನು ಕೇಳಿರುವ ಪ್ರಶ್ನೆ ಬಳ್ಳಾರಿ ತಾಲ್ಲೂಕಿನ ವೆ.ಕಗ್ಗಲ್ಲಿನ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ ಎಂದರೆ ''ಪರಿಶೀಲನೆಯ ಹಂತದಲ್ಲಿದೆ'' ಎನ್ನುತ್ತಾರೆ. 1990ರಿಂದ ಈ ಪ್ರಶ್ನೆ ಕೇಳುತ್ತಲೇ ಬರುತ್ತಿದ್ದೇನೆ. ಇದು ಪರಿಶೀಲನೆಯ ಹಂತದಲ್ಲಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಇದು 10-15 ಹಳ್ಳಿಗಳಿಗೆ ಸಂಬಂಧಪಟ್ಟಿರುತ್ತದೆ. ನಮ್ಮ ಬಳ್ಳಾರಿ ಜಿಲ್ಲೆ ನಿಮಗೆಲ್ಲಾ ಗೊತ್ತಿರುವಂತೆ, ಕ್ಷಾಮ ಇರುವ ಜಿಲ್ಲೆ. ನಮ್ಮ ಬಳ್ಳಾರಿ ತಾಲ್ಲೂಕಿನಲ್ಲಿ ಬಹಳ ಹಿಂದುಳಿದ ಹಳ್ಳಿಗಳು ಇವೆ. ಇದರಿಂದ ಸುಮಾರು ಎಂಟು ಸಾವಿರ ಎಕರೆ ನೀರಾವರಿಯಾಗುತ್ತಿದೆ. 1996ರಿಂದ ಕೇಳುತ್ತಲೇ ಬಂದಿದ್ದೇನೆ. ಇದಕ್ಕೆ ಪರಿಶೀಲನೆ,